ಸದಲಗಾ ಪಟ್ಟಣದಲ್ಲಿ ಲೆವಿ ಸಕ್ಕರೆಯಂ ಮೇಲೆ ತೆರಿಗೆ ವಿಧಿಸಿರುವುದಂ

೨೨೪೭. ಶ್ರೀ ಮಾಗಣ್ಣನವರ (ಸದಲ್ಗ).— ಮಾನ್ಯ ಆಹಾರ ಮಂತ್ರಿ ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಲೆವಿ ಸಕ್ಕರೆ ಪ್ರದೇಶ ತೆರಿಗೆ ಮನ್ನಾ ಮಾಡುವ ಬಗ್ಗೆ ಸದಲ್ಗ ಮುನಿಸಿಪಾಲಿಟಿ ಮತ್ತು ಗ್ರಾಮಸ್ಥರಿಂದ ಮನವಿ ಬಂದಿದೆಯೇ?

ಆ) ಸದರಿ ತೆರಿಗೆಯನ್ನು ಮನ್ನಾ ಮಾಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆಯೇ?

ಇ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡ ಕ್ರಮಗಳೇನು?

ಶ್ರೀ ಬಸವರಾಜ್ ಪಾಟೀಲ್ ತಿಮ್ಮನ ಗೌಡ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಯವರು).—

ಅ) ಬಂದಿದೆ.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.

ನಿಮ್ನ ವರ್ಗದವರ ಮೇಲೆ ನಡೆದ ದೌರ್ಜನ್ಯ

೨೪೪೩. ಶ್ರೀ ಆರ್ ಎಸ್, ನಾಯಕ್ (ಭಟ್ಕಳ).— ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೭–೮೮ನೇ ಸಾಲಿನಲ್ಲಿ ರಾಜ್ಯದ ನಿಮ್ನ ವರ್ಗದವರ ಮೇಲೆ ದೌರ್ಜನ್ಯ ನಡೆಸಿದ ಮತ್ತು ದಾಖಲಾಗಿರುವ ಪ್ರಕರಣಗಳೆಷ್ಟು (ಜಿಲ್ಲಾವಾರು ಮಾಹಿತಿ ತಿಳಿಸುವುದು).

ಆ) ಈ ಸಾಲಿನಲ್ಲಿ ಕೊಲೆ ಪ್ರಕರಣಗಳಲ್ಲಿ ದಾಖಲಾದ ನಿಮ್ನ ವರ್ಗದವರೆಷ್ಟು?

ಇ) ಸದರಿ ಸಾಲಿನಲ್ಲಿ ಎಸ್.ಐ.ಟಿ.ಎ. ಪ್ರಕಾರ (ಪ್ರೊಟೆಕ್ಷನ್ ಆಫ್ ಇಮ್ಮೊರಲ್ ಟ್ರಾಫಿಕ್ ಆಕ್ಟ್) ದಾಖಲಿಸಿಕೊಳ್ಳಲಾಗಿರುವ ಪ್ರಕರಣಗಳೆಷ್ಟು, ಮತ್ತು ದಾಖಲಿಸಿಕೊಳ್ಳಲಾಗಿರುವ ವರದಕ್ಷಿಣೆ ಸಾವಿನ ಪ್ರಕರಣಗಳೆಷ್ಟು?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಯವರು).—

ಅ) ೨೯೭ ಪ್ರಕರಣಗಳು (ಜಿಲ್ಲಾವಾರು ಮಾಹಿತಿಯನ್ನು ಲಗತ್ತಿಸಿದೆ).

ಆ) ೧೭ ಪ್ರಕರಣಗಳು

ಇ) ಎಸ್.ಐ.ಟಿ.ಎ. ೧೬೮೨ ಪ್ರಕರಣಗಳು.

ಪ್ರಕಾರ:

ವರದಕ್ಷಿಣೆ ಸಾವಿನ ೧೪೭

ಪ್ರಕರಣಗಳು